ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ, 1. ಆಲಿ ಅಸ್ಕರ್ ರಸ್ತೆ, ಬೆಂಗಳೂರು-560052.**

ಸಂಖ್ಯೆ: ಸ.ಸಂ.ನಿ/ಸಮಾಪನೆ/20/2019-20. ದಿನಾಂಕ:31-10-2019.

## ಸುತ್ತೋಲೆ ಸಂಖ್ಯೆ –272

ವಿಷಯ: ಸಮಾಪನಾ ಸಹಕಾರ ಸಂಘಗಳು ಬ್ಯಾಂಕುಗಳ ಖಾತೆಗಳಿಂದ ಅನವಶ್ಯವಾಗಿ ಹಣ ತೆಗೆಯುವುದನ್ನು ನಿಯಂತ್ರಿಸುವ ಬಗ್ಗೆ.

<><><>

ರಾಜ್ಯದಲ್ಲಿ ಸಮಾಪನೆಗೊಂಡ ಸಹಕಾರ ಸಂಘಗಳು ಸಹಕಾರ ಬ್ಯಾಂಕುಗಳಲ್ಲಿ ಖಾತೆಗಳನ್ನು ಹೊಂದಿದ್ದು ಆ ಖಾತೆಗಳಿಂದ ಸಮಾಪನಾ ಸಹಕಾರ ಸಂಘಗಳ ಆಸ್ತಿ ಜವಾಬ್ದಾರಿ ವಿಲೇವಾರಿಗೆ ಸಂಬಂಧಿಸಿದಂತೆ ನಿರ್ವಹಿಸುತ್ತಿದ್ದು ಅವುಗಳಲ್ಲಿ ಕೆಲವು ಸಮಾಪನಾ ಸಹಕಾರ ಸಂಘಗಳು ಆಸ್ತಿ ಜವಾಬ್ದಾರಿ ತೀರುವಳಿ ಹೆಸರಿನಲ್ಲಿ ಅನಗತ್ಯವಾಗಿ ಬ್ಯಾಂಕುಗಳ ಖಾತೆಗಳಿಂದ ಹಣ ತೆಗೆಯುವುದು, ಇತರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡಿಕೊಳ್ಳುವುದು, ಹಾಗೂ ದುರುಪಯೋಗ ಪಡಿಸಿಕೊಳ್ಳುತ್ತಿರುವ ವಿಷಯಗಳು ಗಮನಕ್ಕೆ ಬಂದಿರುತ್ತದೆ.

ಇಂತಹ ವಿಷಯಗಳ ಬಗ್ಗೆ ಗಮನ ಹರಿಸಿ ಅನಗತ್ಯವಾಗಿ ಬ್ಯಾಂಕುಗಳ ಖಾತೆಗಳಿಂದ ಹಣ ತೆಗೆಯುವುದನ್ನು ನಿಯಂತ್ರಿಸುವ ಸಲುವಾಗಿ ಹಾಗೂ ಸಮಾಪನಾ ಸಹಕಾರ ಸಂಘಗಳ ಆಸ್ತಿ ಜವಾಬ್ದಾರಿ ತೀರುವಳಿಯ ಹಿತದೃಷ್ಟಿಯಿಂದ ಸಹಕಾರ ಬ್ಯಾಂಕುಗಳು/ರಾಷ್ಟ್ರೀಕೃತ ಬ್ಯಾಂಕುಗಳು ಅಥವಾ ಇತರೆ ಯಾವುದೇ ಸಂಸ್ಥೆಗಳಲ್ಲಿ ಸಮಾಪನಾ ಸಹಕಾರ ಸಂಘಗಳು ಖಾತೆಗಳನ್ನು ಹೊಂದಿದ್ದು, ಅಂತಹ ಖಾತೆಗಳಿಂದ ಸಮಾಪನಾಧಿಕಾರಿಗಳ/ಸಿಬ್ಬಂದಿಗಳ ವೇತನ ಹೊರತು ಪಡಿಸಿ ರೂ. 10,000-00 (ಹತ್ತು ಸಾವಿರ ರೂಪಾಯಿ) ಗಳಿಗೆ ಮೇಲ್ಪಟ್ಟು ಸಮಾಪನಾಧಿಕಾರಿಗಳು ಹಣ ತೆಗೆಯುವ ಪೂರ್ವದಲ್ಲಿ ಕಡ್ಡಾಯವಾಗಿ ಸಹಕಾರ ಸಂಘಗಳ ನಿಬಂಧಕರಿಂದ ಅನುಮತಿ ಪಡೆಯ ತಕ್ಕದ್ದು. ಹಾಗೂ ಸಮಾಪನಾಧಿಕಾರಿಗಳ ಪ್ರಭಾರ ಭತ್ಯೆ ಪಡೆಯಲು ಸಹ ನಿಗದಿತ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರವೆ ಪ್ರಭಾರ ಭತ್ಯೆ ಪಡೆಯಲು ಸೂಚಿಸಿದೆ. ಸದರಿ ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು

Prasanna Kumar G
31/10/2019

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ ಬೆಂಗಳೂರು.

ಗೆ.

1) ಕೇಂದ್ರ ಕಛೇರಿಯ ಎಲ್ಲಾ ಕಾರ್ಯ ನಿರ್ವಹಣಾ ಮುಖ್ಯಸ್ಥರುಗಳಿಗೆ..
2) ಎಲ್ಲಾ ಪ್ರಾಂತೀಯ ಜಂಟಿ ನಿಬಂದಕರುಗಳಿಗೆ.
3) ಎಲ್ಲಾ ಜಿಲ್ಲಾ ಉಪನಿಬಂಧಕರುಗಳಿಗೆ.

pls upload
04/11/19

ಮುಂದುವರಿದಿದೆ.